ಕ್ರಾಂತಿಯಕಿದಿ
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ

ರೆವೆನ್ಯೂ ಬಡಾವಣೆಗಳಿಗೆ "ಬಿ ರಿಜಿಸ್ಟ್ಾರ್" ಹಣಕಾಸು ಸಮಿತಿಯಿಂದ ಮಹತ್ವದ ನಿರ್ಧಾರ

ಮೈಸೂರು : ಮೈಸೂರು ಮಹಾನಗರ ಪಾಲಿಕೆಯಲ್ಲಿ ನಡೆದ ಹಣಕಾಸು ಸ್ಥಾಯಿ ಸಮಿತಿ ಸಭೆಯಲ್ಲಿ ಮೈಸೂರು ನಗರದಲ್ಲಿರುವ ರೆವೆನ್ಯೂ ಬಡವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಮಾದರಿ ಬಿ ರಿಜಿಸ್ಟರ್ ಮಾಡಲು ತೀರ್ಮಾನ ತೆಗೆದುಕೊಂಡು ಅನುಮೋದನೆಗಾಗಿ ನಾಳೆ ನಡೆಯುವ ಕೌನ್ಸಿಲ್ ಸಭೆಯಲ್ಲಿ ಮಂಡಿಸಲು ಶಿಫಾರಸ್ಸು ಮಾಡಲಾಯಿತು.

ಸಭೆಯಲ್ಲಿ ಸಮಿತಿಯ ಅಧ್ಯಕ್ಷರಾದ ಶೋಭಾರವರು ಮಂಡಿಸಿದರು. ಸದಸ್ಯರಾದ ಮ ಏ ರಾಮಪ್ರಸಾದ್ ರವರು ಅನುಮೋದಿಸಿ ಮಾತನಾಡುತ್ತ ಇದರಿಂದ ರೆವೆನ್ಯೂ ಬಡಾವಣೆಗಳನ್ನು ನಗರ ಪಾಲಿಕೆಯ ಮುಖ್ಯ ವಾಹಿನಿಗೆ ತಂದಂತೆ ಆಗುತ್ತದೆ ಹಾಗೂ ಇದುವರೆಗೆ ರೆವೆನ್ಯೂ ನಿವಾಸಿಗಳು ನೀಡಿದ ಕಂದಾಯವನ್ನು ಯಾವುದೇ ರಿಜಿಸ್ಟಾರ್ ನಲ್ಲಿ ದಾಖಲಾಗುತ್ತಿಲ್ಲ.

ಇನ್ನು ಮುಂದೆ 'ಬಿ' ರಿಜಿಸ್ಟರ್ ಆಗುವುದರಿಂದ ದಾಖಲಾಗುತ್ತದೆ. ನಗರ ಪಾಲಿಕೆಗೆ ರೆವೆನ್ಯೂ ಜಾಸ್ತಿ ಆಗುತ್ತದೆ ಎಂದು ತಿಳಿಸಿದರು ಹಾಗೂ ಈಗಾಗಲೇ ರೆವೆನ್ಯೂ ಬಡವಣೆಗಳಿಗೆ ಮೂಲ ಭೂತ ಸೌಕರ್ಯಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಸದಸ್ಯರಾದ ಮ ಏ ರಾಮಪ್ರಸಾದ್, ರಮೇಶ್(ರಮಣಿ) , ಜಿ ರೂಪ, ಶ್ರೀನಿವಾಸ್, ಭುವನೇಶ್ವರಿ, ಹಾಜಿರಾ ಸೀಮಾ ಭಾಗವಹಿಸಿದ್ದರು

ಸಿಎಂ ಗೆ ಪೂರ್ಣಕುಂಭ ಸ್ವಾಗತ ಚಾಮುಂಡೇಶ್ವರಿಗೆ ವಿಶೇಷ ಪೂಜೆ

ಮೈಸೂರು: ಇಂದು ರಾಜ್ಯದ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆದ ಬಳಿಕ ಇದೇ ಮೊದಲ ಬಾರಿಗೆ ಸಾಂಸ್ಕೃತಿಕ ನಗರ ಮೈಸೂರಿಗೆ ರಸ್ತೆ ಮೂಲಕ ಆಗಮಿಸಿದರು.

ಮೊದಲು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದರು. ಈ ವೇಳೆ ಚಾಮುಂಡಿ ಬೆಟ್ಟದಲ್ಲಿ ಮುಖ್ಯಮಂತ್ರಿಗಳಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಗಳು ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿ ಚಾಮುಂಡಿ ಬೆಟ್ಟಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೇಟಿ ನೀಡಿದ್ದು, ನಾಡಿನ ಅಧಿದೇವತೆ ಚಾಮುಂಡೇಶ್ವರಿ ಅಮ್ಮನವರ ದರ್ಶನ ಪಡೆದು ನಾಡಿಗೆ ಒಳಿತಾಗುವಂತೆ ಹಾಗೂ ಕೊರೋನಾ ಮಹಾಮಾರಿ ದೂರ ಮಾಡುವಂತೆ ಇದೇ ವೇಳೆ ಪ್ರಾರ್ಥಿಸಿದರು.

ಮುಖ್ಯಮಂತ್ರಿಗಳಿಗೆ ಸಚಿವರಾದ ಎಸ್.ಟಿ. ಸೋಮಶೇಖರ್, ಭೈರತಿ ಬಸವ ರಾಜ್, ವಿ.ಸೋಮಣ್ಣ, ಮುರುಗೇಶ್ ನಿರಾಣಿ, ಡಾ.ಕೆ. ಸುಧಾಕರ್, ಡಾ. ನಾರಾಯಣಗೌಡ, ಮುನಿರತ್ನ, ಗೋಪಾಲಯ್ಯ ಅವರು ಸಾಥ್ ನೀಡಿದರು.

ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಗಳನ್ನು ಶಾಸಕ ಜಿ.ಟಿ. ದೇವೇಗೌಡ ಅವರು ಬೃಹತ್ ಮಲ್ಲಿಗೆಯ ಹಾರವನ್ನು ಹಾಕುವ ಮೂಲಕ ಬರ ಮಾಡಿಕೊಂಡರು.

ಮುಖ್ಯಮಂತ್ರಿ ಬಂದು ಹೋಗುವವರೆಗೂ ಭಕ್ತರು ಚಾಮುಂಡೇಶ್ವರಿ ದೇಗುಲ ಪ್ರವೇಶಿಸದಂತೆ ನಿಬಂಧ ವಿಧಿಸಲಾಗಿದ್ದು, ಮುಖ್ಯಮಂತ್ರಿ ಬಂದು ಹೋಗುವವರೆಗೂ ದೂರದ ಊರುಗಳಿಂದ ಬಂದಿದ್ದ ಭಕ್ತರು ಕಾಯ್ದು ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ದೂರದೂರುಗಳಿಂದ ಬಂದರೂ ಸಕಾಲಕ್ಕೆ ದೇವಿಯ ದರ್ಶನ ಪಡೆಯಲಾಗದೇ ಭಕ್ತರು ಕಾದು ನಿಂತಿದ್ದರು.

ಹಲಗೂರು: ಮಳಿಗೆಗಳಿಗೆ ಭೂಮಿ ಪೂಜೆ ಕಾರ್ಯಕ್ರಮ

ಹಲಗೂರು: ಹಲಗೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರದ ಮಳಿಗೆಗಳಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಟಿ.ಡಿ. ನಾಗೇಂದ್ರರವರು ಭೂಮಿಪೂಜೆ ನೆರವೇರಿಸಿದರು.

ನಂತರ ಮಾಜಿ ಅಧ್ಯಕ್ಷರಾದ ಆನಂದ್ ಕುಮಾರ್ ಮಾತನಾಡಿ, ನಮ್ಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ,ಮಳಿಗೆಗಳಿಗೆ ಹಾಗೂ ಡಿಸಿಸಿ ಬ್ಯಾಂಕ್ ,ಅನುಕೂಲವಾಗುವ ನಿಟ್ಟಿನಲ್ಲಿ 45 ಲಕ್ಷ ರೂ ವೆಚ್ಚದಲ್ಲಿ ಕಟ್ಟಡವನ್ನು ನಿರ್ಮಿಸಲು ಇಂದು ಭೂಮಿ ಪೂಜೆ ನೆರವೇರಿಸಿದ್ದೇವೆ. ಎಲ್ಲಾ ನಿರ್ದೇಶಕರು ಹಾಗೂ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ,ಸಹಕಾರದಿಂದ ಅತಿ ಶೀಘ್ರದಲ್ಲೇ ಕಾಮಗಾರಿ ಮುಗಿಯಲಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಅಧ್ಯಕ್ಷರಾದ ನಾಗೇಂದ್ರ, ಶ್ರೀನಿವಾಸಾಚಾರಿ, ನಾರಾಯಣಗೌಡ, ಪದ್ಮನಾಭ, ಪುಟ್ಟಮಾದೇಗೌಡ, ಹೊನ್ನೇಗೌಡ, ನಾಗೇಶ್, ಮಲ್ಲಮ್ಮ, ಲಕ್ಷ್ಮಮ್ಮ, ಭೈರವಯ್ಯ ಹಾಜರಿದ್ದರು.

ಎಂಪಿಸಿಎಸ್‌ಗೆ ಆಯ್ಕೆ; ಇತಿಹಾಸ ನಿರ್ಮಿಸಿದ ಬಿಜೆಪಿ ಅಭ್ಯರ್ಥಿ ಮಾಲತಿ ಬಸವೇಗೌಡ

ಕೃಷ್ಣರಾಜಪೇಟೆ: ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನೂತನ ಅಧ್ಯಕ್ಷರಾಗಿ ಇಂದು ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಾಲತಿ ಬಸವೇಗೌಡ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜೆಡಿಎಸ್ ಅಭ್ಯರ್ಥಿ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಸಂಗಾಪುರ ಶಶಿಧರ್ ಅವರನ್ನು ಎರಡು ಮತಗಳ ಅಂತರದಿಂದ ಪರಾಭವಗೊಳಿಸುವ ಮೂಲಕ ಇತಿಹಾಸವನ್ನು ನಿರ್ಮಿಸಿದರು.

ಕಳೆದ 10 ವರ್ಷಗಳಿಂದ ಜೆಡಿಎಸ್ ತೆಕ್ಕೆಯಲ್ಲಿದ್ದ ಎಪಿಎಂಸಿ ಆಡಳಿತ ಮಂಡಳಿಯನ್ನು ಇದೇ ಪ್ರಪ್ರಥಮ ಬಾರಿಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಾ ಕಣದಲ್ಲಿದ್ದ ಮಾಲತಿ ಬಸವೇಗೌಡ ತಮ್ಮ ಪಕ್ಷಕ್ಕೆ ಬಹುಮತವಿಲ್ಲದಿದ್ದರೂ ಜೆಡಿಎಸ್ ಪಕ್ಷದ ಇಬ್ಬರು ನಿರ್ದೇಶಕರು ಚಲಾಯಿಸಿದ ಅಡ್ಡಮತದಾನದ ಮೂಲಕ 8 ಮತಗಳನ್ನು ಪಡೆದುಕೊಂಡು 6 ಮತ ಪಡೆದ ಸಂಗಾಪುರಶಶಿಧರ್ ಅವರನ್ನು 02 ಮತಗಳ ಅಂತರದಿಂದ ಪರಾಭವಗೊಳಿಸಿ ಬಿಜೆಪಿ ಪಕ್ಷಕ್ಕೆ ಅಭೂತಪೂರ್ವ ಗೆಲುವನ್ನು ತಂದುಕೊಟ್ಟರು.

14 ಸದಸ್ಯರ ಬಲದ ಎಪಿಎಂಸಿ ಮಾರುಕಟ್ಟೆಯ ಆಡಳಿತ ಮಂಡಳಿಯಲ್ಲಿ ಮೂವರು ನಾಮನಿರ್ದೇಶಿತ ಸದಸ್ಯರಾದ ಕರ್ತೇನಹಳ್ಳಿ ಸುರೇಶ್, ಹೊಸೂರು ಸ್ವಾಮಿಗೌಡ, ಪ್ರಮೀಳವರದರಾಜೇಗೌಡ, ಅಕ್ಕಿಹೆಬ್ಬಾಳು ನಾಗರಾಜು, ಮಹೇಶ್ವರಿ ನರಸೇಗೌಡ ಮತ್ತು ಮಾಲತಿಬಸವೇಗೌಡ ಅವರು 6 ಜನರು ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಲು ತೆರಳಿದರು. ಜೆಡಿಎಸ್ ಪಕ್ಷದ ವತಿಯಿಂದ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಸಂಗಾಪುರ ಶಶಿಧರ್ 08 ಸದಸ್ಯರೊಂದಿಗೆ ಅಧ್ಯಕ್ಷ ಚುನಾವಣೆಯನ್ನು ಎದುರಿಸಲು ನಡೆದರು ಚುನಾವಣಾಧಿಕಾರಿಗಳಾದ ತಹಶೀಲ್ದಾರ್ ಶಿವಮೂರ್ತಿ ರಹಸ್ಯ ಮತದಾನದ ಮೂಲಕ ನೂತನ ಅಧ್ಯಕ್ಷರ ಆಯ್ಕೆಗೆ ಚುನಾವಣೆಯನ್ನು ನಿಗಧಿಪಡಿಸಿದಾಗ 06 ಮತವನ್ನು ಹೊಂದಿದ್ದ ಮಾಲತಿಬಸವೇಗೌಡರ ಪರವಾಗಿ 08 ಮತಗಳು ಬಂದರೆ 08 ಮತಗಳನ್ನು ಹೊಂದಿದ್ದ ಜೆಡಿಎಸ್ ಪಕ್ಷದ ಎರಡು ಮತಗಳು ಅಡ್ಡಮತ ಚಲಾವಣೆಯಾಗಿ ಕೇವಲ 06 ಮತ ಪಡೆದ ಅವರು ಮಾಲತಿಬಸವೇಗೌಡರಿಂದ 02 ಮತಗಳ ಅಂತರದಿಂದ ಪರಾಭವಗೊಂಡರು. ಗೆಲುವು ನಮ್ಮದೇ ಎಂಬ ಆತ್ಮವಿಶ್ವಾಸದಿಂದ ಅಧ್ಯಕ್ಷ ಚುನಾವಣೆಯಲ್ಲಿ ಭಾಗವಹಿಸಿದ್ದ ಜೆಡಿಎಸ್ ಬೆಂಬಲಿತ ನಿರ್ದೇಶಕರು ಬಹುಮತವಿದ್ದರೂ ಗೆಲುವು ದಾಖಲಿಸಲಾಗದೇ ಪೆಚ್ಚು ಮೋರೆಯನ್ನು ಹಾಕಿಕೊಂಡು ಎಪಿಎಂಸಿ ಆಡಳಿತ ಕಛೇರಿಯಿಂದ ಹೊರ ಬಂದರು.

ಬಿ ಜೆ ಪಿ ಅಭ್ಯರ್ಥಿ ಮಾಲತಿಬಸವೇಗೌಡ ಅವರು ಭರ್ಜರಿ ಗೆಲುವು ದಾಖಲಿಸಿದರೆಂಬ ಫಲಿತಾಂಶದ ಘೋಷಣೆಯಾಗುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಪಟಾಕಿಗಳನ್ನು ಸಿಡಿಸಿ ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು. ಜೆಡಿಎಸ್ ಭದ್ರಕೋಟೆಯಾಗಿದ್ದ ಎಪಿಎಂಸಿ ಆಡಳಿತ ಮಂಡಳಿಯ ಮುಖಂಡರಾದ ಹೆಚ್.ಟಿ.ಮಂಜು ಮತ್ತು ಬಿ.ಎಲ್. ದೇವರಾಜು ಗುಂಪುಗಳ ಕಿತ್ತಾಟದಿಂದಾಗಿ ಇಂದು ಸ್ಪಷ್ಟವಾದ ಬಹುಮತವನ್ನು ಹೊಂದಿದ್ದರೂ ಕೂಡ ಎಪಿಎಂಸಿ ಆಡಳಿತ ಮಂಡಳಿಯ ಅಧಿಕಾರವನ್ನು ಉಳಿಸಿಕೊಳ್ಳಲಾಗದೇ ಬಿಜೆಪಿ ಪಕ್ಷಕ್ಕೆ ಧಾರೆಯೆರೆದಿದ್ದು ಜೆಡಿಎಸ್ ನಾಯಕರ ಕಿತ್ತಾಟವು ಹಾದಿ-ಬೀದಿ ಜಗಳದ ಮೂಲಕ ಬಯಲಾಯಿತು. ಮಾಜಿಶಾಸಕ ಕೆ.ಬಿ.ಚಂದ್ರಶೇಖರ್ ಅವರ ಸಹೋದರರಾದ ಪಿಎಲ್‌ಡಿ ಬ್ಯಾಂಕಿನ ಮಾಜಿಅಧ್ಯಕ್ಷ ಕೆ.ಎಸ್.ಬಸವೇಗೌಡರ ಪತ್ನಿಯಾದ ಮಾಲತಿಬಸವೇಗೌಡ ಅವರು ಇಂದು ತಾನೇ ಕಾಂಗ್ರೆಸ್ ಪಕ್ಷಕ್ಕೆ ಗುಡ್‌ಬೈ ಹೇಳಿ ಬಿಜೆಪಿ ಪಕ್ಷವನ್ನು ಸೇರ್ಪಡೆಗೊಂಡು ಕಮಲ ಭಾವುಟವನ್ನು ಕೈಯ್ಯಲ್ಲಿ ಹಿಡಿಯುವ ಮೂಲಕ ಎಪಿಎಂಸಿ ಆಡಳಿತ ಮಂಡಳಿಯನ್ನು ಬಿಜೆಪಿ ತೆಕ್ಕೆಗೆ ತಂದುಕೊಡುವಲ್ಲಿ ಯಶಸ್ವಿಯಾದರು. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವ ತಂತ್ರಗಾರಿಕೆ ರಚಿಸಿದ್ದ ಸಚಿವ ಡಾ.ನಾರಾಯಣಗೌಡ ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಪಕ್ಷಗಳಿಗೂ ಮರ್ಮಾಘಾತ ನೀಡಿ ಬಿಜೆಪಿ ಅಭ್ಯರ್ಥಿಗೆ ವಿಜಯಮಾಲೆಯನ್ನು ತೊಡಿಸುವ ಮೂಲಕ ಇದೇ ಮೊದಲ ಬಾರಿಗೆ ಎಪಿಎಂಸಿ ಆಡಳಿತವನ್ನು ಬಿಜೆಪಿ ಪಕ್ಷಕ್ಕೆ ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ನೂತನವಾಗಿ ಎಪಿಎಂಸಿ ಅಧ್ಯಕ್ಷೆಯಾಗಿ ಆಯ್ಕೆಯಾಗಿ ಇತಿಹಾಸ ನಿರ್ಮಿಸಿರುವ ಮಾಲತಿ ಬಸವೇಗೌಡ ಅವರನ್ನು, ಸಚಿವ ಡಾ.ನಾರಾಯಣಗೌಡ, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್‌ಅರವಿಂದ್, ಮನ್‌ಮುಲ್ ನಿರ್ದೇಶಕ ಕೆ.ಜಿ.ತಮ್ಮಣ್ಣ, ತಾಲೂಕು ಬಿಜೆಪಿ ಓಬಿಸಿ ಮೋರ್ಚಾ ಅಧ್ಯಕ್ಷ ಸಾರಂಗಿನಾಗರಾಜು, ಎಸ್.ಸಿ.ಮೋರ್ಚಾ ಅಧ್ಯಕ್ಷ ರವಿಶಿವಕುಮಾರ್, ಮುಖಂಡರಾದ ಕಾಗಿನಹಳ್ಳಿಕುಮಾರ್, ಭಾರತೀಪುರ ಎಳನೀರುಪುಟ್ಟಣ್ಣ, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಮಂಜುನಾಥಗೌಡ, ಬಸವರಾಜು, ಜಗಧೀಶ್, ಬಿಲ್ಲೇನಹಳ್ಳಿಕುಮಾರ್, ರಾಯಸಮುದ್ರ ಪುಟ್ಟಸ್ವಾಮಿಗೌಡ, ಲಕ್ಷ್ಮೀಪುರ ಶಿವಪ್ರಸಾದ್, ಕರ್ತೇನಹಳ್ಳಿಸುರೇಶ್ ಮತ್ತಿತರರು ಅಭಿನಂದಿಸಿ ಗೌರವಿಸಿದರು.

ಚುನಾವಣಾ ಸಹಾಯಕರಾಗಿ ಎಪಿಎಂಸಿ ಕಾರ್ಯದರ್ಶಿ ರಫೀಕ್‌ಅಹಮದ್, ರಾಯಸಮುದ್ರ ಸತೀಶ್, ಚುನಾವಣಾ ಶಾಖೆಯ ಮಂಜುನಾಥ್, ಶಿವಕುಮಾರ್ ಮತ್ತು ಎಪಿಎಂಸಿ ಕಛೇರಿಯ ಆಡಳಿತಮಂಡಳಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನೂತನವಾಗಿ ಎಪಿಎಂಸಿ ಅಧ್ಯಕ್ಷೆಯಾಗಿ ಆಯ್ಕೆಯಾದ ಮಾಲತಿಬಸವೇಗೌಡ ಪತ್ರಕರ್ತರೊಂದಿಗೆ ಮಾತನಾಡಿ ನಾನು ನಿನ್ನೆಯವರೆಗೂ ಕಾಂಗ್ರೇಸ್ ಪಕ್ಷದಲ್ಲಿದ್ದೆ, ಕ್ಷೇತ್ರದ ಶಾಸಕರು ಹಾಗೂ ರಾಜ್ಯದ ಯುವಜನಸೇವೆ, ಕ್ರೀಡೆ ಹಾಗೂ ರೇಷ್ಮೆ ಖಾತೆಗಳ ಸಚಿವರಾದ ಡಾ.ನಾರಾಯಣಗೌಡರ ಮೇಲೆ ವಿಶ್ವಾಸವನ್ನಿಟ್ಟುಕೊಂಡು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಿ ಬಿಜೆಪಿ ಬೆಂಬಲದಿಂದ ಚುನಾವಣೆಯನ್ನು ಎದುರಿಸಿದ ನನಗೆ ನನ್ನ ಜೀವನದಲ್ಲಿಯೇ ಮರೆಯಲಾಗದ ದೊಡ್ಡ ಕಾಣಿಕೆಯು ಸಿಕ್ಕಿದೆ, ರೈತರ ಜೀವನಾಡಿಯಾಗಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕಯಿಕಲ್ಲು ನೀಡಿ ಆಡಳಿತ ನಡೆಸುವ ಜೊತೆಗೆ ದಳ್ಳಾಳಿಗಳ ಹಾವಳಿಯನ್ನು ತಪ್ಪಿಸಿ ರೈತರಿಯ ಮಾರುಕಟ್ಟೆಗೆ ಮಾರಾಟ ಮಾಡಲು ತರುವ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾದ ಬೆಲೆಯು ದೊರೆಯುವಂತೆ ಮಾಡುತ್ತೇನೆ. ನಮ್ಮ ಎಳನೀರು ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸುವ ಜೊತೆಗೆ ಮಾರುಕಟ್ಟೆಗೆ ಆಗಮಿಸುವ ರೈತಬಾಂಧವರು ಹಾಗೂ ವರ್ತಕರಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಹಾಗೂ ರೈತಭವನವನ್ನು ನಿರ್ಮಿಸಲು ಬದ್ಧತೆಯಿಂದ ಕೆಲಸ ಮಾಡುತ್ತೇನೆ ಎಂದು ಮಾಲತಿಬಸವೇಗೌಡ ಹೇಳಿದರು.

ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರು ಗಿಡ ನೆಟ್ಟು ಪೋಷಿಸಿ

ಭಾರತೀನಗರ : ಭವಿಷ್ಯದಲ್ಲಿ ಜನರ ಜೀವನ ಸಮೃದ್ಧಿಯಿಂದ ಕೂಡಿರಬೇಕಾದರೆ ಎಲ್ಲರೂ ಪರಿಸರ ಸಂರಕ್ಷಣೆ ಮಾಡಬೇಕು. ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಪೋಷಿಸಬೇಕೆಂದು ಆರ್.ಕೆ.ವಿದ್ಯಾಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿನಯ್‌ರಾಮಕೃಷ್ಣ ಕಳಕಳಿ ವ್ಯಕ್ತಪಡಿಸಿದ್ದಾರೆ.

ವನಮಹೋತ್ಸವದಲ್ಲಿ ವಿನಯ್‌ರಾಮಕೃಷ್ಣ ಕಳಕಳಿ

ಭಾರತೀನಗರ ಸಮೀಪದ ಕೆ.ಹೊನ್ನಲಗೆರೆ ಆರ್.ಕೆ.ವಿದ್ಯಾಸಂಸ್ಥೆಯಲ್ಲಿ ವನಮಹೋತ್ಸವ ಕಾರ್ಯಕ್ರಮದಲ್ಲಿ ಗಿಡನೆಡುವ ಮೂಲಕ ವಿನಯ್‌ರಾಮಕೃಷ್ಣ ಅವರು ಚಾಲನೆ ನೀಡಿದರು.

ಇಲ್ಲಿಗೆ ಸಮೀಪದ ಕೆ.ಹೊನ್ನಲಗೆರೆಯ ಆರ್.ಕೆ. ವಿದ್ಯಾಸಂಸ್ಥೆಯಲ್ಲಿ ಅರಣ್ಯ ಇಲಾಖೆ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಜಿಲ್ಲಾ ಕೂಲಿಕಾರರ ಸಂಘ, ಜಿಲ್ಲಾ ಸ್ಕೌಡ್ಸ್, ಮತ್ತು ಗೈಡ್ ಸಂಸ್ಥೆ, ಇನ್ನರ್‌ವಿಲ್ ಸಂಸ್ಥೆ ಇವರ ಸಹಯೋಗದಲ್ಲಿ ವನಮಹೋತ್ಸವ ಹಾಗೂ ಆರ್.ಕೆ.ಇ-ಲರ್ನ್, ಯೂಟೂಬ್ ಚಾಲನ್, ಆರ್.ಕೆ. ಪ್ಲಾಸ್ಟಿಕ್ ಮರುಬಳಕೆ ಯೋಜನೆಯ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಪರಿಸರವನ್ನು ಉಳಿಸಿದರೆ ಮಾತ್ರ ಮುಂದಿನ ದಿನಗಳಲ್ಲಿ ಮನುಕುಲ ಉತ್ತಮ ಜೀವನ ನಡೆಸಲು ಸಾಧ್ಯ. ಪ್ರತಿಯೊಬ್ಬರು ಪರಿಸರವನ್ನು ಉಳಿಸಬೇಕು. ಅರಣ್ಯವನ್ನು ಬೆಳೆಸಬೇಕು. ಇದರಿಂದ ಉತ್ತಮ ಪರಿಸರ ಉಂಟಾಗಿ ಪ್ರತಿಯೊಬ್ಬರಿಗೂ ಉತ್ತಮ ಗಾಳಿ ಸಿಗುವುದರಿಂದ ಉತ್ತಮ ಆರೋಗ್ಯ ಲಭಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಅರಣ್ಯ ನಾಶದಿಂದ ಉಸಿರಾಡುವ ಗಾಳಿಯನ್ನು ಸಹ ಹಣ ನೀಡಿ ಪಡೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮುಂದಿನ ಜನಾಂಗಕ್ಕೆ ನಾವು ನೀಡುವ ದೊಡ್ಡ ಉಡುಗೊರೆ ಎಂದರೆ ನಾವು ಉತ್ತಮ ಪರಿಸರವನ್ನು ನೀಡುವುದು ಎಂದು ತಿಳಿಸಿದರು.

ಜಿಲ್ಲಾ ಉಪಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭೂಮಿಯ ಮೇಲೆ ಮನುಷ್ಯನ ಬದುಕು ದಿನದಿನದಿಂದ ದಿನಕ್ಕೆ ಅಸ್ಥಿರವಾಗುತ್ತಿದೆ. ಮನುಕುಲ ನಡೆಸಿದ ದೌರ್ಜನ್ಯದಿಂದ ಪ್ರಕೃತಿ ವಿಕೋಪ ಮತ್ತು ಸಂಕ್ರಾಮಿಕ ರೋಗಗಳ ರೂಪದಲ್ಲಿ ಮನುಷ್ಯನ್ನು ಕಾಡುತ್ತಿದೆ.

ಪರಿಸರ ಸಂರಕ್ಷಣೆ ಮಹತ್ವದ ಬಗ್ಗೆ ಮನುಷ್ಯನಿಗೆ ಹಿಂದೆಂಗಿಂತಲೂ ಇಂದು ಪರಿಣಾಮಕಾರಿಯಾಗಿ ಮನದಟ್ಟಾಗುತ್ತಿದೆ. ಪರಿಸರ ಸಂರಕ್ಷಣೆಯಲ್ಲಿ ಹಸಿರು ಕಾಪಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕು. ಮಾಲೀನ್ಯ ತಡೆಗಟ್ಟಬೇಕು. ಮನುಷ್ಯನೊಂದಿಗೆ ಸಹಬಾಳ್ವೆ ನಡೆಸುತ್ತಿರುವ ಇತರ ಜೀವಿಗಳ ರಕ್ಷಣೆ ಅತಿಮುಖ್ಯವಾಗಿದೆ. ಎಂದರು.

ದೇಶದಲ್ಲಿ ಅರಣ್ಯ ಪ್ರದೇಶ ಶೇ 33 ರಷ್ಟು ಇರಬೇಕಾಗಿದೆ. ಆದರೆ ಈಗ ಶೇ 22 ರಷ್ಟಿದ್ದು, ಮಂಡ್ಯ ಜಿಲ್ಲೆಯಲ್ಲಿ ಶೇ 16 ರಷ್ಟು ಅರಣ್ಯ ಪ್ರದೇಶವಿದೆ. ಮುಂದಿನ ದಿನಗಳಲ್ಲಿ ಶೇ 33 ರಷ್ಟು ಅರಣ್ಯ ಪ್ರದೇಶ ಹೆಚ್ಚಳ ಮಾಡಲು ಸಹಕರಿಸಬೇಕೆಂದರು.

ಇಡೀ ವಿಶ್ವವನ್ನೇ ಕಾಡುತ್ತಿರುವ ಮಹಾಮಾರಿ ಕೊರೋನಾ ಸೋ